ಸಂಖ್ಯೆ ಟಿಯುಡಿಎ / ಎಲ್‌ಎಒ / 1A / 2006-07 / 8912

ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿ,
ಬೆಳಗುಂಬ ರಸ್ತೆ, ತುಮಕೂರು.
ದಿನಾಂಕ : 14-02-2008

**ಶ್ರೀ ಎಂ.ನಾರಾಯಣ್**
ಬಿನ್ ಮೈಲಾರಪ್ಪ,
"ಮಾತೃಶ್ರೀ", ವೆಂಕಟೇಶಪುರ,
ಕಾಳಿದಾಸ ನಗರ,
ತುಮಕೂರು.

**ಮಾನ್ಯರೆ,**

**ವಿಷಯ** : ತುಮಕೂರು ತಾಲ್ಲೂಕು, **ಮರಳೇನಹಳ್ಳಿ** ಗ್ರಾಮದ ಸರ್ವೆ ನಂಬರ್ **34/7, 34/8ಎ2, 34/8ಬಿ** ರಲ್ಲಿ **1 ಎಕರೆ 13.07.49 ಗುಂಟೆ** ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ** :1. ನಿಮ್ಮ ಅರ್ಜಿ ದಿನಾಂಕ **05-04-2007**
2. ಪ್ರಾಧಿಕಾರಕ್ಕೆ ಸೆಕ್ಷನ್ 14(ಎ) ರನ್ವಯ ಶುಲ್ಕ ಪಾವತಿಸಿದ ರಸೀದಿ ಸಂಖ್ಯೆ **14552** ರೂ.**28,172** (ಇಪ್ಪತ್ತೆಂಟು ಸಾವಿರದ ಒಂದು ನೂರ ಎಪ್ಪತ್ತೆರಡು ರೂಪಾಯಿಗಳು ಮಾತ್ರ) ದಿನಾಂಕ **08-10-2007**
3. ಪ್ರಾಧಿಕಾರದ ಸಭೆಯ ದಿನಾಂಕ **24-05-2007** ರ ವಿಷಯ ಸಂಖ್ಯೆ **07**

* * * * *

ವಿಷಯಕ್ಕೆ ಸಂಬಂಧಿಸಿದಂತೆ, ನೀವು ನೀಡಿರುವ ಅರ್ಜಿಯನ್ನು ಪರಿಶೀಲಿಸಲಾಗಿ, ಅನುಮತಿ ನೀಡುವ ಸಂಬಂಧ ಪಾವತಿಸಿದ ಶುಲ್ಕಗಳನ್ನು ಪರಿಗಣಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(1) ರನ್ವಯ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1987 ರ ನಿಯಮದಂತೆ ಈ ಕೆಳಕಂಡ ಷರತ್ತುಗಳೊಂದಿಗೆ ನಕ್ಷೆಯನ್ನು ಅನುಮೋದಿಸಲಾಗಿದೆ.

1. ಈಗ ನೀಡಿರುವ ವಿನ್ಯಾಸ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ.
2. ಅನುಮೋದಿತ ರೂಪರೇಖಾ ನಕ್ಷೆಯಂತೆ ವಿನ್ಯಾಸವನ್ನು ಜಮೀನಿನಲ್ಲಿ ಅಭಿವೃದ್ಧಿಪಡಿಸಿದ ನಂತರವೇ ಅಂದರೆ ರಸ್ತೆಯ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸೌಕರ್ಯ, ವಿದ್ಯುತ್ ವ್ಯವಸ್ಥೆ ಇತ್ಯಾದಿಗಳನ್ನು ನಿರ್ಮಿಸಿದ ನಂತರ ಈ ಪ್ರಾಧಿಕಾರದ ಪರಿಶೀಲನೆಗಾಗಿ ತಿಳಿಸತಕ್ಕದ್ದು ಮತ್ತು ಪ್ರಾಧಿಕಾರದಿಂದ ವಿನ್ಯಾಸಕ್ಕೆ ಅಂತಿಮ ಅನುಮೋದನೆ ಪಡೆಯತಕ್ಕದ್ದು.
3. ವಿನ್ಯಾಸ ಪ್ರದೇಶವನ್ನು ಈ ಪ್ರಾಧಿಕಾರದ ಅನುಮೋದನೆ ನೀಡಿದ 18 ತಿಂಗಳ ಒಳಗಾಗಿ ಸಂಪೂರ್ಣವಾಗಿ (ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ) ಅಭಿವೃದ್ಧಿಪಡಿಸತಕ್ಕದ್ದು. ತಪ್ಪಿದ್ದಲ್ಲಿ ಈ ಅನುಮೋದನೆಯು ಯಾವ ಸೂಚನೆಯೂ ಇಲ್ಲದೆ ತಂತಾನೆ ರದ್ದಾಗುತ್ತದೆ.

4. ಪ್ರಸ್ತಾವಿತ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯಲ್ಲಿ ಸೀವೇಜ಼ಾ ಟ್ರೀಟ್‌ಮೆಂಟ್ ಪ್ಲಾಂಟ್ ಅನ್ನು ಸ್ಥಾಪಿಸಬೇಕು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ದಿನಾಂಕ 21-11-2005 ರ ಪತ್ರ ಸಂಖ್ಯೆ 217/KSPCB/RO-BNG(S-II)CFE/-2005-2006/5361 ಷರತ್ತುಗಳನ್ನು ತಪ್ಪದೇ ಅನುಸರಿಸತ್ತಕ್ಕದ್ದು.
5. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸ್ಯಗಳನ್ನು ಬೆಳೆಸುವುದು.
6. ಅನುಮೋದಿತ ವಿನ್ಯಾಸದಲ್ಲಿನ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್‌ಜಲ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
7. ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆಗಳು, ಉದ್ಯಾನವನವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಈ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಕಾಯ್ದಿರಿಸಿರುವ ಪ್ರದೇಶಗಳನ್ನು ಒತ್ತುವರಿಯಾಗದಂತೆ ಸಂರಕ್ಷಿಸತ್ಕದ್ದು.
8. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಈ ಕೆಳಗಿನ ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯ ಕೂಡಲೇ ರದ್ದಾಗುವುದು.
9. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕ ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
10. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ, ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಮತ್ತು ಉಪಯೋಗಿಸಲು ಬರುವುದಿಲ್ಲ.
11. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.
12. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿ ತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೆ ರದ್ದುಗೊಳ್ಳುತ್ತದೆ.
13. ಈ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡುವ ಪ್ರಚಾರದಲ್ಲಿ ಪ್ರಾಧಿಕಾರದಿಂದ ಅನುಮೋದನೆ ಆಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
14. ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (Paved Foot Path) ನಿರ್ಮಿಸುವುದು.
15. ಅರ್ಜಿದಾರರ ಮನವಿಯಂತೆ ಸರ್ಕಾರದ ಸುತ್ತೋಲೆಯ ಸಂಖ್ಯೆ ನಅಇ / 112 / ಬೆಂರೂಪ್ರಾ / 2005 ದಿನಾಂಕ 26-05-2005 ರಲ್ಲಿನ ಮಾರ್ಗಸೂಚಿಯಂತೆ ಈ ಕೆಳಕಂಡ ನಿವೇಶನಗಳನ್ನು ನೊಂದಣಿಗಾಗಿ ಬಿಡುಗಡೆ ಮಾಡಲಾಗಿದೆ.

| ಕ್ರ.ಸಂ. | ವಿಸ್ತೀರ್ಣ | ನಿವೇಶನಗಳ ಸಂಖ್ಯೆ | ಒಟ್ಟು |
|---|---|---|---|
| 1. | 30X40 | 02, 03, 04, 05, 06, 07, 08, 09, 10, 13, 14, 15 | 12 |
| 2. | 30X35 | 18, 21, 22 | 03 |
| 3. | ODD Sites | 01 | 01 |
| | | ಒಟ್ಟು | 16 |

ತಮ್ಮ ನಂಬುಗೆಯ,

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

**ಪ್ರತಿಯನ್ನು**

1. ಆಯುಕ್ತರು, ನಗರ ಸಭೆ, ತುಮಕೂರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
2. ಉಪನೋಂದಣಾಧಿಕಾರಿಗಳು, ತುಮಕೂರು ತಾಲ್ಲೂಕು, ತುಮಕೂರು ರವರಿಗೆ ನಕ್ಷೆಯೊಂದಿಗೆ ಕಳುಹಿಸಿದೆ.




LAY-OUT PLAN

LAND - USE ANALYSIS:

| SL. NO. | PARTICULERS | AREA S.FT. | % | RELEASED SITE NO.S | NOT RELEASED SITE NO'S |
|---|---|---|---|---|---|
| 1 | RESIDENTIAL. | 31,790.00 | 54.59% | 1, 2, 3, 4, 5, 6, 7, 8, 9, 10, 13, 14, 15, 18, 21, 22, | 11, 12, 16, 17, 19, 20, 23, 24, 25 |
| 2 | PARK | 5,904.00 | 10.14% | | |
| 3 | ROADS | 20,532.00 | 35.27% | | |
| | TOTAL AREA | 58,226.00 | 100.00% | | |




GOVERNMENT OF KARNATAKA.

TUMKUR URBAN DEVELOPMENT AUTHORITY.

TUMKUR

| | |
|---|---|
| TOWN PLANNING MEMBER<br>TUDA<br>TUMKUR | COMMISSIONER<br>TUDA<br>TUMKUR |
| DRN. BY. / CKD BY. | DRG NO: |

1(a)